ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 823
ಸದಸ್ಯರ ಹೆಸರು : ಶ್ರೀ.ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 17.12.2018
ಉತ್ತರಿಸುವ ಸಚಿವರು : ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ರಾಜ್ಯದ್ಯಂತ ಪಶುಸಂಗೋಪನೆ ಇಲಾಖೆಯಲ್ಲಿ ಎಷ್ಟು ಪಶುವೈದ್ಯಾಧಿಕಾರಿಗಳ ಹುದ್ದೆ ಮಂಜೂರಾಗಿವೆ: (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದ್ಯಂತ ಪಶುಸಂಗೋಪನೆ ಇಲಾಖೆಯ ಪಶುವೈದ್ಯಾಧಿಕಾರಿಗಳ ಹುದ್ದೆಗಳ ಜಿಲ್ಲಾವಾರು ವಿವರವನ್ನು **ಅನುಬಂಧ** ದಲ್ಲಿ ನೀಡಲಾಗಿದೆ.
ಆ)	ಪಶುಚಿಕಿತ್ಸೆ ಕೇಂದ್ರಗಳಲ್ಲಿ ಮತ್ತು ಪಶು ಆಸ್ಪತ್ರೆಗಳಲ್ಲಿ ಪಶುವೈದ್ಯರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು:	ಹೌದು, ವಿಶೇಷ ನೇರನೇಮಕಾತಿ ನಿಯಮ 2017 ರಡಿಯಲ್ಲಿ ಒಟ್ಟು 476 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ತುಂಬಲಾಗಿದ್ದು ಹೈದರಾಬಾದ್-ಕರ್ನಾಟಕ ಮೀಸಲು ಹುದ್ದೆಯಲ್ಲಿ ಆಯ್ಕೆಯಾದ 75 ಅಭ್ಯರ್ಥಿಗಳಲ್ಲಿ ಸಿಂಧುತ್ವ ಬಂದಿರುವ 57 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ, ಪ್ರಸ್ತುತ ಖಾಲಿ ಇರುವ 466 ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಕ್ರಮವಹಿಸಲಾಗಿದೆ. ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳಿಗೆ ಪ್ರಭಾರ ವ್ಯವಸ್ಥೆ ಮಾಡಲಾಗಿದೆ,
ಇ)	ಪಶುವೈದ್ಯಕೀಯ ಇಲಾಖೆಯಲ್ಲಿ ಪಶುವೈದ್ಯರ ಕೊರತೆಯಿದ್ದರೂ ಸಹ ಇವರನ್ನು ಬೇರೆ ಇಲಾಖೆಗೆ ನಿಯೋಜನೆ ಮೇಲೆ ಕಳುಹಿಸಿರುವುದು ಸರಿಯೇ:	ನಿಯೋಜನೆ ಮೇಲೆ ಬೇರೆ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಶುವೈದ್ಯರ ನಿಯೋಜನೆಯನ್ನು ರದ್ದು ಪಡಿಸಿ, ಇಲಾಖೆಯ ಪಶುಚಿಕಿತ್ಸಾಲಯ ಮತ್ತು ಪಶು ಆಸ್ಪತ್ರೆಗಳಲ್ಲಿರುವ ಖಾಲಿ ಇರುವ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಿಸಿದೆ.
ಈ)	ನಿಯೋಜನೆ ಮೇಲೆ ಬೇರೆ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಶುವೈದ್ಯರನ್ನು ತತ್‌ಕ್ಷಣವೆ ಮಾತೃ ಇಲಾಖೆಗೆ ಕರೆಸಿಕೊಂಡು ಖಾಲಿಯಿರುವ ಪಶುಚಿಕಿತ್ಸಾ ಕೇಂದ್ರ ಮತ್ತು ಆಸ್ಪತ್ರೆಗಳ ವೈದ್ಯಾಧಿಕಾರಿಗಳ ಹುದ್ದೆಗೆ ನೇಮಿಸಿಕೊಳ್ಳುವುದರ ಬಗ್ಗೆ ಸರ್ಕಾರ ಸ್ಪಷ್ಟ ಉತ್ತರ ನೀಡುವುದು?	ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 156 ಪಅಸೇ 2018 ಮತ್ತು ಆದೇಶ ಸಂಖ್ಯೆ: ಪಸಂಮೀ 173 ಪಸಸೇ 2015 (ಭಾಗ-2) ದಿನಾಂಕ: 12-10-2018 ರಲ್ಲಿ ಇಲಾಖಾ ಕಾರ್ಯಚಟುವಟಿಕೆಗಳಿಗೆ ಪೂರಕವಲ್ಲದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳ ಹುದ್ದೆಗಳಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಹಾಗೂ ನಗರಾಭಿವೃದ್ಧಿ ಇಲಾಖೆಯಲ್ಲಿ ಆಯುಕ್ತರಾಗಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ನಿರ್ದೇಶಕರು/ಮುಖ್ಯ ಪಶುವೈದ್ಯಾಧಿಕಾರಿಗಳು/ಹಿರಿಯ ಪಶುವೈದ್ಯಾಧಿಕಾರಿಗಳು/ಪಶುವೈದ್ಯಾಧಿಕಾರಿಗಳ ಒಟ್ಟು

		21 ಪಶುವೈದ್ಯಾಧಿಕಾರಿಗಳ ನಿಯೋಜನೆಯನ್ನು ರದ್ದುಪಡಿಸಿ ಪಶುವೈದ್ಯಾಧಿಕಾರಿ ಹುದ್ದೆ ಖಾಲಿ ಇರುವ ಪಶುವೈದ್ಯ ಸಂಸ್ಥೆಗಳಿಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ ಹಾಗೂ ಸದರಿ ಸ್ಥಳಗಳಲ್ಲಿ ಕರ್ತವ್ಯಕ್ಕೆ ಹಾಜರಾಗಲು ಸೂಚಿಸಲಾಗಿರುತ್ತದೆ.

ಸಂ: ಪಸಂಮೀ 146 ಪಸಸೇ 2018

13/12/18

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು

ಕರ್ನಾಟಕ ವಿಧಾನ ಪರಿಷತ್ತು ಪ್ರಶ್ನೆ ಸಂಖ್ಯೆ: 823 ಕ್ಕೆ ಅನುಬಂಧ

ಕ್ರ ಸಂ	ಜಿಲ್ಲೆಗಳು	ಉಪನಿರ್ದೇಶಕರು			ಸಹಾಯಕ ನಿರ್ದೇಶಕರ			ಮುಖ್ಯ ಪಶುವೈದ್ಯಾಧಿಕಾರಿಗಳು/ ಹಿರಿಯ ಪಶುವೈದ್ಯಾಧಿಕಾರಿಗಳು/ ಪಶುವೈದ್ಯಾಧಿಕಾರಿಗಳು		
		ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ	ಮಂಜೂರು	ಭರ್ತಿ	ಖಾಲಿ
1	ಬೆಂಗಳೂರು ನಗರ	17	12	5	4	3	1	73	63	10
2	ಬೆಂಗಳೂರು ಗ್ರಾಮಾಂತರ	2	1	1	4	4	0	76	76	0
3	ತುಮಕೂರು	4	2	2	10	8	2	166	133	33
4	ಚಿತ್ರದುರ್ಗ	3	1	2	6	5	1	87	66	21
5	ದಾವಣಗೆರೆ	2	–	2	6	4	2	117	97	20
6	ಕೋಲಾರ	2	1	1	4	3	1	85	72	13
7	ಶಿವಮೊಗ್ಗ	2	1	1	7	7	0	103	73	30
8	ಚಿಕ್ಕಬಳ್ಳಾಪುರ	2	1	1	6	5	1	86	72	14
9	ರಾಮನಗರ	2	–	2	4	3	1	71	62	9
10	ಮೈಸೂರು	2	2	–	7	7	0	124	88	36
11	ಚಾಮರಾಜನಗರ	2	–	2	4	4	0	56	24	32
12	ದಕ್ಷಿಣ ಕನ್ನಡ	3	3	–	5	5	0	49	32	17
13	ಉಡುಪಿ	2	2	–	3	2	1	61	28	33
14	ಹಾಸನ	3	1	2	8	8	0	142	86	56
15	ಚಿಕ್ಕಮಗಳೂರು	3	2	1	7	6	1	91	62	29
16	ಮಂಡ್ಯ	2	1	1	7	7	0	144	89	55
17	ಕೊಡಗು	3	1	2	3	1	2	44	24	20
18	ಬೆಳಗಾವಿ	2	1	1	10	6	4	203	138	65
19	ಬಿಜಾಪುರ	2	–	2	5	5	0	81	61	20
20	ಬಾಗಲಕೋಟೆ	2	1	1	6	4	2	94	60	34
21	ಧಾರವಾಡ	5	4	1	5	3	2	69	50	19
22	ಗದಗ್	2	1	1	5	3	2	80	23	57
23	ಹಾವೇರಿ	3	2	1	7	5	2	78	54	24
24	ಉತ್ತರ ಕನ್ನಡ	2	2	0	12	4	8	114	31	83
25	ಗುಲ್ಬರ್ಗಾ	4	–	4	7	2	5	142	87	55
26	ಯಾದಗಿರಿ	2	–	2	3	3	0	59	23	36
27	ಬಳ್ಳಾರಿ	3	2	1	7	0	7	114	49	65
28	ಬೀದರ್	2	–	2	5	2	3	115	102	13
29	ರಾಯಚೂರು	2	1	1	5	2	3	85	36	49
30	ಕೊಪ್ಪಳ	3	1	2	4	0	4	48	24	24
31	ಇತರೆ	–	–	–	–	–	–	284	226	58
	ಒಟ್ಟು	90	46	44	176	121	55	3141	2111	1030